ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ''2001ರ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ವಿಧೇಯಕವನ್ನು'' ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: X ವಿಧೇಯಕವನ್ನು ಮಂಡಿಸಲಾಗಿದೆ X

(ಆ) ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಶ್ರೀ ಎ.ರಾಮದಾಸ್(ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಇಂದು ಮಂಡಿಸಿರುವ ವಿಧೇಯಕದ ಬಗ್ಗೆ ಕೊನೆಯ ಪಕ್ಷ ನಮಗೆ ಓದಿಕೊಳ್ಳಲು ಅವಕಾಶ ಕೊಡಬೇಕು. ಪರ್ಯಾಲೋಚನಾ ಪ್ರಸ್ತಾಪದಲ್ಲಿ ಮೊದಲ ವಿಚಾರವನ್ನೇನು ನಮೂದಿಸಿದ್ದೀರಿ ಅದನ್ನು ಈಗಷ್ಟೇ ಮಂಡನೆ ಮಾಡಿದ್ದೀರಿ. ಆದ್ದರಿಂದ ಇದರ ಬಗ್ಗೆ ಮಾತನಾಡಲು ಸದಸ್ಯರುಗಳಿಗೆ ದಯಮಾಡಿ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ತಾವು ಹೇಳುವುದು ಸರಿ; ಇದನ್ನು ನಾಳೆ ತೆಗೆದುಕೊಳ್ಳೋಣ. ಎರಡನೆ ವಿಚಾರವನ್ನು ಈಗ ತೆಗೆದುಕೊಳ್ಳೋಣ.

(i) ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕ, 2001

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ''2001ರ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು'' ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಸೆಕ್ಷನ್ 48ಎ ಪ್ರಕರಣದ ತಿದ್ದುಪಡಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ

[X] - ಅನುಬಂಧ -VI

(1962ರ ಕರ್ನಾಟಕ ಅಧಿನಿಯಮ 10) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 48ಎ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ- ಈ ಪ್ರಕರಣದ ಉದ್ದೇಶಕ್ಕಾಗಿ ''ಅಧಿಭೋಗದಾರ ಎಂದು ನೋಂದಾಯಿತನಾಗಬೇಕಾದ ಯಾವನೇ ವ್ಯಕ್ತಿಗೆ'' ಎಂಬುದರಲ್ಲಿ ಹೆಂಡತಿ:ಗಂಡ ಅಥವಾ ಹೆಂಡತಿಯರನ್ನು ಹೊಂದಿರುವ ಒಬ್ಬ ವ್ಯಕ್ತಿಯ ಸಂಬಂಧದಲ್ಲಿ ಅಂಥ ವ್ಯಕ್ತಿ ಮತ್ತು ಅವನ ಅಥವಾ ಅವಳ ಜೀವಂತ ಹೆಂಡತಿ:ಗಂಡ ಅಥವಾ ಅವರ ಹೆಂಡತಿಯರನ್ನು ಒಳಗೊಳ್ಳುತ್ತದೆ.

55ನೇ ಪ್ರಕರಣದ ತಿದ್ದುಪಡಿ ಮೂಲ ಅಧಿನಿಯಮದ 55ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ 'ಗೇಣಿದಾರನು ಅಧಿಭೋಗದಾರನಾಗಿ ನೋಂದಾಯಿತನಾಗಿದ್ದಾನೆಂದು' ಎಂಬ ಪದಗಳಿಗೆ ''ಗೇಣಿದಾರನ ಜೊತೆಯಲ್ಲಿ ಅವನ ಅಥವಾ ಅವಳ ಜೀವಂತ ಹೆಂಡತಿ:ಗಂಡ ಅಥವಾ ಅವನ ಹೆಂಡತಿಯರು ಜಂಟಿ ಅಧಿಭೋಗದಾರರಾಗಿ ನೋಂದಾಯಿತರಾಗಿದ್ದಾರೆಂದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಮೈನಾರಿಟೀಸ್‌ನಲ್ಲಿ ನಾಲ್ಕು ಜನ ಹೆಂಡತಿಯರು ಇರುತ್ತಾರೆ, ಆಗ ನಾಲ್ಕೂ ಜನರು ಪಾಲುದಾರರಾಗುತ್ತಾರೆ. ಲೀಗಲ್ ಆಗಿ, ಸಂವಿಧಾನಾತ್ಮಕವಾಗಿ ಯಾರಿಗೆ ಅವಕಾಶವಿದೆಯೋ ಅವರಿಗೆ ಇದು ಅನ್ವಯವಾಗುತ್ತದೆ.

77ಎ ಪ್ರಕರಣದ ತಿದ್ದುಪಡಿ: ಮೂಲ ಅಧಿನಿಯಮದ 77ಎ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ ''ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಅಧಿನಿಯಮ, 1997ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗೆ'' ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಬಿಟ್ಟು ಬಿಡತಕ್ಕದ್ದು ಮತ್ತು ಯಾವಾಗಲೂ ಬಿಟ್ಟುಬಿಟ್ಟಿರುವುದಾಗಿ ಭಾವಿಸತಕ್ಕದ್ದು. ಅಧಿನಿಯಮದಲ್ಲಿ ಈ ಮೊದಲು ಒಂದು ವರ್ಷವೆಂದು ಇತ್ತು ಅದನ್ನು ತೆಗೆದು ಈಗ ಯಾವಾಗಬೇಕಾದರೂ ಮಾಡಿಸಬಹುದು.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಕಂದಾಯ ಸಚಿವರೇನು ಗಂಡನ ಹೆಸರಿದ್ದಲ್ಲಿ ಹೆಂಡತಿಯ ಹೆಸರನ್ನೂ ಸೇರಿಸತಕ್ಕದ್ದು, ಹೆಂಡತಿ ಹೆಸರಿನಲ್ಲಿ ಇದ್ದರೆ ಗಂಡನ ಹೆಸರನ್ನು ಸೇರಿಸತಕ್ಕ ತಿದ್ದುಪಡಿಗಳನ್ನು ತಂದಿದ್ದಾರೆ ಅದನ್ನು ಸ್ವಾಗತಿಸುತ್ತೇವೆ. ಆಕ್ಯುಪೆನ್ಸಿ ರೈಟ್ ತೆಗೆದುಕೊಳ್ಳುವಾಗ, ಟಿನೆಂಟ್ ಎಂದು ಕಲ್ಟಿವೇಷನ್ ಮಾಡುವಾಗ ಗಂಡ:ಹೆಂಡತಿ ಕೂಡಿಯೇ ಮಾಡುತ್ತಿದ್ದಾರೆ. ಆದರೆ ಮನೆಯ ಹಿರಿಯನೆಂದು ಗಂಡನೊಬ್ಬನ ಹೆಸರಿನಲ್ಲಿ ಅದು ಇರುತ್ತದೆ. ಆದ್ದರಿಂದ ಜಂಟಿಯಾಗಿ ಅದನ್ನು ಮಾಡಬೇಕೆಂದಿರುವುದು ಒಳ್ಳೆಯದು. ಇದು ಈ ಹಿಂದಿನದಕ್ಕೂ ಅನ್ವಯವಾಗುತ್ತದೋ ಅಥವಾ ಮುಂದಿನದಕ್ಕೆ ಮಾತ್ರ

ಅನ್ವಯವಾಗುತ್ತದೋ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಇನ್ನು ಮುಂದಿನದಕ್ಕೆ ಮಾತ್ರ ಇದು ಅನ್ವಯವಾಗುತ್ತದೆ.

ಶ್ರೀ ಜಗದೀಶ್‌ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಈಗ ಎಲ್ಲಾ ಇಂಥ ಕೇಸುಗಳು ಮುಗಿಯಲು ಬಂದಿದೆ. ಈ ಒಂದೆ ಬೇಕಾದಷ್ಟು ಆಕ್ಯುಪೆನ್ಸಿ ರೈಟ್ ಸಿಕ್ಕಿದೆ. ಆಕ್ಯುಪೆನ್ಸಿ ರೈಟ್‌ನ ಸಲುವಾಗಿ ತಾವೇನು ಫಾರಂ ನಂಬರ್ 7ನ್ನು ತುಂಬಲು ಅವಧಿಯನ್ನು ಏಸ್ತರಣೆ ಮಾಡಿದ್ದೀರಿ ಆವಾಗಿನಿಂದ ಮಾತ್ರ ಅದು ಅನುಕೂಲವಾಗುತ್ತದೆ. ಮೊನ್ನೆ ತಾವು ಮಾತನಾಡುತ್ತಾ ಆಕ್ಯುಪೆನ್ಸಿ ರೈಟ್‌ನ ಸಲುವಾಗಿ ಸಮಯವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ ಅದು ಸರಿಯೋ ತಪ್ಪೋ ತಿಳಿಸಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಮೊದಲು 'ಒಂದು ವರ್ಷವೆಂದು ಇತ್ತು ಅದಕ್ಕೆ ಈಗ ಸಮಯವೇ ಇಲ್ಲ ಒಂದು ವರ್ಷ ಎಂದು ಇದ್ದದ್ದನ್ನು ತೆಗೆದು ಹಾಕಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇದಕ್ಕೆ ಲಿಮಿಟೇಷನ್ ಇಡಬೇಕಾಗುತ್ತದೆ. ತಾವೇನು ಮೊದಲು ಒಂದು ವರ್ಷ ಎಂದು ನಿಗದಿ ಮಾಡಿದ್ದೀರಿ ಅದು ಒಂದು ರೀತಿಯಲ್ಲಿ ಸರಿಯಾಗಿತ್ತು. ಅದನ್ನು ಎರಡು ಇಲ್ಲವೇ ಮೂರು ವರ್ಷವೆಂದು ಮಾಡಬಹುದಿತ್ತು. ಆದರೆ ಯಾವಾಗ ಬೇಕಾದರೂ ಮಾಡಬಹುದು ಎಂದರೆ ಸರಿಯಾಗುವುದಿಲ್ಲ ಅದಕ್ಕೆ ಏನಾದರೂ ಲಿಮಿಟೇಷನ್ ಇರಬೇಕಾಗುತ್ತದೆ. 1976ಕ್ಕಿಂತ ಮೊದಲು ಯಾರು ಆಕ್ಯುಪೆಂಟ್ ಇದ್ದರು ಅವರು ಎಂದು ಕಟ್ ಆಫ್ ಮಾಡಿದ್ದೀರಿ. ಹಾಗಿರುವಾಗ ತಾವು ಹೀಗೆ ಮಾಡಿದರೆ ಮೂಲ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ಏನಿದೆ ಅದಕ್ಕೆ ವ್ಯತಿರಿಕ್ತವಾಗುತ್ತದೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಇದರ ಮುಖ್ಯ ಉದ್ದೇಶ ಬಹಳವಾಗಿದೆ. ಭಾರತ ಸರ್ಕಾರ, ಹಾಗೂ ರಾಜ್ಯ ಸರ್ಕಾರ ಮಹಿಳೆಯರಿಗೆ ಇತ್ತೀಚೆಗೆ ಬಹಳಷ್ಟು ಹಣಕಾಸಿಗೆ ಸಂಬಂಧಪಟ್ಟಂತೆ ಅನುಕೂಲಗಳನ್ನು ಒದಗಿಸುತ್ತಿದೆ. ಆದ್ದರಿಂದ ಮಹಿಳೆಯರು ಖಾತೆದಾರರಲ್ಲದಿದ್ದರೆ ಆ ಸೌಲಭ್ಯವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಬಹುಮುಖ್ಯವಾಗಿ ಆ ಹೆಂಗಸಿಗೆ ಲಭಿಸಬೇಕಾದ ಸೌಲಭ್ಯ ಲಭಿಸಲಿ ಎಂದು ಈ ನಿಯಮಗಳನ್ನು ಜಾರಿಗೆ ತಂದಿದ್ದೇನೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್(ಬೀರೂರು): ಅಧ್ಯಕ್ಷರೇ, ಇದನ್ನು ಸ್ವಾಗತ ಮಾಡುತ್ತಾ ಇದರಲ್ಲೊಂದು ಸಮಸ್ಯೆ ಇದೆ. ಉದ್ದೇಶಿತ ಕಾರಣದಲ್ಲಿ 'ಗೇಣಿದಾರನ ಜೊತೆಯಲ್ಲಿ ಆತನ ಅಥವಾ ಆಕೆಯ ಜೀವಂತ ಹೆಂಡತಿಯ ಬ್ರಾಕೆಟ್ ಗಂಡನನ್ನು ಬಿಟ್ಟು ಅಧಿ

ಭೋಗದಲ್ಲಿ ಸೇರಿಸಬೇಕೆಂದು ಇದೆ. ಒಬ್ಬ ಗಂಡಹೆಂಡತಿ ಇರುತ್ತಾರೆ. ಹೆಂಡತಿ ಸತ್ತುಹೋಗಿಬಿಡುತ್ತಾಳೆ. ಅವಳಿಗೆ ಮಕ್ಕಳಿರುತ್ತವೆ. ಎರಡನೇ ಹೆಂಡತಿ ಬರುತ್ತಾಳೆ, ಅವರನ್ನು ಕಾನೂನು ಪ್ರಕಾರ ಸೇರಿಸುತ್ತೀರಿ. ಆಗ ಮೊದಲನೇ ಹೆಂಡತಿ ಮಕ್ಕಳ ಗತಿಯೇನಾಗುತ್ತದೆ? ಏಕೆಂದರೆ ಒರಿಜಿನಲ್ ಗೇಣಿದಾರರಾಗೇ ಅವರಿರುತ್ತಾರೆ. ಅವರ ಸಮಸ್ಯೆಯನ್ನು ನಾವು ಹೇಗೆ ಪರಿಹಾರ ಮಾಡುವುದು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಯಾರಿಗೂ ಮೋಸ ಮಾಡಲು ಅವಕಾಶವಿಲ್ಲ. ನೀವು ಕಿರಿಹೆಂಡತಿಯನ್ನು ಜೊತೆ ಮಾಡಿಕೊಂಡು ಮೋಸ ಮಾಡಿಬಿಟ್ಟರೆ? ಮೊದಲನೆ ಹೆಂಡತಿ ಮಕ್ಕಳಿಗೂ ಹಕ್ಕು ಇರುತ್ತದೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಈ ವಿಧೇಯಕದ ಪ್ರಕಾರ ಅದು ಹೇಗೆ ಬರುತ್ತದೆ ಹೇಳಿ. ನಾನು ಹೇಳುವುದು, ತಾಯಿ ಸತ್ತಂತಹ ಮಕ್ಕಳೇನಿದ್ದಾರೆ ಅವರಿಗೆ ಈ ಕಾನೂನಿನಿಂದ ಬಹಳಷ್ಟು ಅನ್ಯಾಯವಾಗುತ್ತದೆ. ಅದಕ್ಕಾಗಿ ಯಾರು ಕಾನೂನುಬದ್ಧವಾಗಿ ವಾರಸುದಾರರಾಗುವರೋ ಅವರು ಜಂಟಿ ಖಾತೆ ತೆರೆಯಬೇಕೆಂದು ತಿದ್ದುಪಡಿ ಮಾಡದೇ ಹೋದರೆ ತಾಯಿ ಸತ್ತ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಹೌದು ಅಂತಹ ತಿದ್ದುಪಡಿ ಮಾಡದಿದ್ದರೆ ಎರಡನೇ ಹೆಂಡತಿ ಮಕ್ಕಳಿಗೆ ಹೋಗುತ್ತದೆ, ಮೊದಲನೇ ಹೆಂಡತಿ ಮಕ್ಕಳಿಗೆ ಏನೂ ಬರುವುದೇ ಇಲ್ಲ.

ಶ್ರೀ ಆರ್.ವಿ.ದೇಶಪಾಂಡೆ(ಕೈಗಾರಿಕಾ ಸಚಿವರು): ಸೆಕ್ಷನ್ 48ಎ ಅಂದರೆ 7ನೇ ಫಾರಂನಲ್ಲಿ ಡಿಕ್ಲರೇಷನ್ ಕೊಡುತ್ತಾರೆ ಅದಕ್ಕೆ ಆಕ್ಯುಪೆನ್ಸಿ ರೈಟ್ ಕೊಡುವುದು. ಒಂದು ವೇಳೆ ಯಾರಿಂದ 7ನೇ ಫಾರಂ ಡಿಕ್ಲರೇಷನ್ ಆಗಿಲ್ಲವೆಂದರೆ ಅವರು ಈಗ ಜಿಲ್ಲಾಧಿಕಾರಿಗಳಿಗೆ ಅರ್ಜಿ ಕೊಡಲು ಅವಕಾಶವಿರುತ್ತದೆ, ಅದಕ್ಕೆ ಒಂದು ವರ್ಷ ಎಂದು ಇದ್ದುದ್ದನ್ನು ಈಗ ತೆಗೆದಿದ್ದಾರೆ. ಆ ಅರ್ಜಿ ಬಂದಾಗ ಗಂಡನ ಜೊತೆ ಹೆಂಡತಿ ಇದ್ದರೆ ಹೆಂಡತಿಗೂ ಅಧಿಕಾರ ಸಿಗುತ್ತದೆ. ಅವಳೂ ಮಾಲೀಕಳಾಗುತ್ತಾಳೆ, ಒಂದು ಸಲ ಮಾಲೀಕತ್ವ ತೀರ್ಮಾನವಾದರೆ ಅವರು ಖಾತೆದಾರರಾಗುತ್ತಾರೆ. ಅದರ ನಂತರ, ಸಪೋಸ್, ಒಬ್ಬ ಹೆಂಡತಿ ತೀರಿಕೊಂಡರೆ ಎರಡನೇ ಹೆಂಡತಿ ಮದುವೆಯಾದರೂ ಸಹ ಆಗ ಭಾರತೀಯ ಸಕ್ಸೆಷನ್ ಆಕ್ಟ್ ಅನ್ವಯವಾಗುತ್ತದೆ.

ಶ್ರೀ ಕೆ.ಬಿ.ಮಲ್ಲಿಕಾರ್ಜುನ: ಇಲ್ಲ ಈ ಕಾನೂನು ಪ್ರಕಾರ ಮೊದಲ ಹೆಂಡತಿ ಸತ್ತು ಹೋಗಿರುವ ಮಕ್ಕಳಿಗೆ ಅಧಿಕಾರ ಸಿಕ್ಕುವುದಿಲ್ಲ ಸಾರ್. ಸಕ್ಸೆಷನ್ ಆಕ್ಟ್ ಇದರಲ್ಲಿ ಬರುವುದೇ ಇಲ್ಲವಲ್ಲಾ ಇದನ್ನು ದಯಮಾಡಿ ಪರಿಶೀಲನೆ ಮಾಡಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಒಂದು ವೇಳೆ ಹೆಂಡತಿ ಮಕ್ಕಳನ್ನು ಹಡೆದು ಸತ್ತುಹೋದ ಮೇಲೆ ಎರಡನೇ ಹೆಂಡತಿ ಮದುವೆಯಾದ ಮೇಲೂ ಇವನು ಅರ್ಜಿ ಹಾಕುತ್ತಾನೆ. ಆಗ ಏನು ಪೊಜಿಷನ್? ನಿಮ್ಮ ಪ್ರಕಾರ ಗಂಡಹೆಂಡತಿ ಅಂದರೆ ಎರಡನೇ ಹೆಂಡತಿ ಆಗಿರುತ್ತಾಳೆ, ಮೊದಲ ಹೆಂಡತಿ ಮಕ್ಕಳ ಗತಿಯೇನು? ಜೊತೆಗೆ ಜೀವಂತ ಹೆಂಡತಿ ಎಂದು ಬರೆದಿದ್ದೀರಿ.

ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ): ಹೌದು, ನಮ್ಮಲ್ಲಂತೂ ಬಹಳಷ್ಟು ಇಂತಹ ಪ್ರಕರಣಗಳಿವೆ. ನಾಳೆ ಈ ಕಾನೂನು ಅವರ ಕುತ್ತಿಗೆಗೆ ಉರುಳಾಗುವುದು. ಇದನ್ನು ಮಾಡುವಾಗ ಸಮಗ್ರವಾಗಿ ಯೋಜನೆ ಮಾಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಕಾನೂನು ಸಚಿವರೂ ಇದರಲ್ಲಿ ಪ್ರವೇಶ ಮಾಡಬೇಕಾಗುತ್ತದೆ. ನಮ್ಮಲ್ಲಿ ಸುಮಾರು 5 ರಿಂದ 6 ಸಾವಿರ ಕೇಸ್‌ಗಳಿವೆ ಅಧಿ ಭೋಗದಾರಿಕೆ ಸರ್ವೆ ಸೆಟ್ಲ್‌ಮೆಂಟ್ ಷರತ್ತುಗೊಳಪಟ್ಟು ಹಾಕಿಕೊಂಡಿದ್ದಾರೆ. ಸರ್ವೆ ಆಗಿದೆ, ಪುನಃ ಎರಡನೇ ಜಡ್ಜ್‌ಮೆಂಟ್ ಆಗಬೇಕಾಗಿದೆ. ಈಗ ಎಲ್ಲರನ್ನೂ ಜಂಟಿ ಖಾತೆಯಲ್ಲಿಡುತ್ತಾರೆ. ಈಗೇನಾಗಿದೆ, ಮಲಮಕ್ಕಳಿದ್ದಾರೆ, ಈಗಿನ ಹೆಂಡತಿ ಮಕ್ಕಳು ಗಂಡನ ಜೊತೆಗಿದ್ದಾರೆ. ಆ ಗಂಡಹೆಂಡತಿಗಿಬ್ಬರಿಗೆ ಜಂಟಿ ಖಾತೆ ಹಾಕಿದರೆ ನಾಳೆ ಇವರಿಬ್ಬರೂ ಸೇರಿ ಆ ಹೆಂಡತಿ ಮಕ್ಕಳನ್ನು ಹೊರ ಕಳುಹಿಸಲು ಅವಶಕಾಶವಾಗುತ್ತದೆ. ಆದ್ದರಿಂದ ಮಾನ್ಯ ಮಲ್ಲಿಕಾರ್ಜುನ್, ಮತ್ತು ಹೆಗಡೆಯವರು ಹೇಳಿದಂತೆ ಕಾನೂನುಬದ್ಧರಾದವರು ಯಾರ್ಯಾರು ಇರುತ್ತಾರೆ ಅವರೆಲ್ಲರ ಹೆಸರಿನಲ್ಲಿ ಜಂಟಿಯಾಗಿಯೇ ಖಾತೆಯಾಗಲಿ. ಇಲ್ಲದಿದ್ದರೆ ಇದನ್ನು ಕೈಬಿಡುವುದು ಒಳ್ಳೆಯದು. ಏಕೆಂದರೆ ತಮ್ಮ ಉದ್ದೇಶವೇನೋ ಒಳ್ಳೆಯದೇ. ಆದರೆ ಇದರಿಂದ ಇನ್ನೊಂದಷ್ಟು ಜನಕ್ಕೆ ಕಿರುಕುಳ ಆಗುತ್ತದೆ. ನಾಳೆ ಅವರು ಬೀದಿಪಾಲಾಗುವರು. ನಿಜವಾಗೂ ತಂದೆ ಜೊತೆ ಆ ಮಕ್ಕಳು ಉತ್ತುಬಿತ್ತು ಜೀವನ ಮಾಡುತ್ತಿರುತ್ತಾರೆ, ಆಮೇಲೆ ಕುಟುಂಬಕುಟುಂಬದಲ್ಲೇ ಕಲಹ ಶುರುವಾಗುವುದು. ಸಹಜವಾಗೇ ಗಂಡಹೆಂಡತಿ ಒಟ್ಟಿಗೆ ಆಗಿಬಿಡುತ್ತಾರೆ, ಮಲಮಕ್ಕಳು ಬೇರೆಯಾಗಿ ಬಿಡುತ್ತಾರೆ, ಆದ್ದರಿಂದ ಇದನ್ನು ಬಹಳ ಪರಿಶೀಲನೆ ಮಾಡಬೇಕು.

ಶ್ರೀ ಎಸ್.ಪಿ.ಮುದ್ದಹನುಮೇಗೌಡ(ಕುಣಿಗಲ್): ಅಧ್ಯಕ್ಷರೇ, ನಾನು ಮಾನ್ಯ ಮಲ್ಲಿಕಾರ್ಜುನ್ ಮತ್ತು ಮಾನ್ಯ ಹೆಗಡೆಯವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾದ ಕೆಲವು ವಿಷಯ ಹೇಳುತ್ತೇನೆ. ಈಗಿರುವುದರಿಂದ ತೊಂದರೆಯೇನಿಲ್ಲ, ಅವರಿಗೆ ಪತಕ್ಕೆ ಆ ಆತಂಕ ಬಂತು ಎಂಬುದು ನನಗರ್ಥವಾಗಿಲ್ಲ. ಈಗ ಕೇವಲ ಅಕ್ಯುಪೆಂಟ್ ಎಂದು ರಿಜಿಸ್ಟ್ರೇಷನ್ ಮಾಡಬೇಕಾದ ಉದ್ದೇಶಕ್ಕಾಗಿ ಮಾತ್ರ ಅವರ ಹೆಸರಷ್ಟನ್ನೇ ಸೇರಿಸುವುದು. ಅದು ಅವರ ಖಾಸಗಿ ಸ್ವತ್ತೇನಾಗಿಬಿಡುವುದಿಲ್ಲ. ಉದಾಹರಣೆಗೆ,

ತಂದೆ ಹೆಸರಿನಲ್ಲಿ ಖಾತೆ ಇರುತ್ತದೆ, ಅಂದರೆ ಮಕ್ಕಳಿಗೆ ಅಧಿಕಾರ ಇಲ್ಲವೇ? ಅವರಿಗೆ ಅಧಿಕಾರ ಇದ್ದೇ ಇದೆ. ಇಲ್ಲಿ ಆಕ್ಯುಪೆನ್ಸಿ ರೈಟ್ ಗಂಡ ಅಥವಾ ಹೆಂಡತಿ ಹೆಸರಲ್ಲಿ ರಿಜಿಸ್ಟರಾಗಿ ಬಿಟ್ಟಾಕ್ಷಣಕ್ಕೇನೆ ಅದರರ್ಥ ಮಕ್ಕಳು ಅದರ ಮೇಲೆ ಹಕ್ಕು ಕಳೆದುಕೊಂಡು ಬಿಡುವರು ಎಂದರ್ಥವಲ್ಲ. ಸಹಜವಾಗಿಯೇ ಅದು ಕುಟುಂಬದ ಸ್ವತ್ತಾಗುವುದು. ಜಂಟಿ ಕುಟುಂಬದ ಸ್ವತ್ತಾಗುವುದು. ತಂದೆ ಮಕ್ಕಳೆಲ್ಲಾ ಒಟ್ಟಗೆ ಇದ್ದರೆ ಎಲ್ಲರ ಹೆಸರಿನಲ್ಲೂ ಆಕ್ಯುಪೆನ್ಸಿ ರೈಟ್ಸ್ ರಿಜಿಸ್ಟರಾಗಬೇಕಾದ ಅವಶ್ಯಕತೆಯಿಲ್ಲ. ತಂದೆ ಅಥವಾ ತಾಯಿ ಹೆಸರಿಗೆ ಜಂಟಿಯಾಗಿ ಆದಾಗ ಸಹಜವಾಗಿ ಅದು ಕುಟುಂಬದ ಸ್ವತ್ತಾಗುವುದು. ಆಗ ಕಾನೂನಿನ ಪ್ರಕಾರ ಲೀಗಲ್‌ಹೇರ್ ಆಗಿ ಅವರು ಏನು ಪಡೆಯಲು ಅರ್ಹರೋ ಅದನ್ನು ಪಡೆದೇ ಪಡೆಯುತ್ತಾರೆ. ಆದ್ದರಿಂದ ಮಾನ್ಯ ಮಲ್ಲಿಕಾರ್ಜುನ್ ಮತ್ತು ಮಾನ್ಯ ಹೆಗಡೆಯವರ ಆತಂಕಕ್ಕೆ ಯಾವುದೇ ಹುರುಳಿಲ್ಲವೆಂದು ಹೇಳುತ್ತಾ ಎರಡನೆಯದು ನನ್ನದು ಒಂದೇ ಒಂದು ಅನುಮಾನ ಇದೆ. ಆಕ್ಯುಪೆನ್ಸಿ ರೈಟ್ಸ್ ಅನ್ನು ರಿಜಿಸ್ಟರ್ ಮಾಡಿಸಲು, ಒಂದು ಅರ್ಜಿ ಸಲ್ಲಿಸಬೇಕಾಗಿರುವಂಥ ಅವಶ್ಯಕತೆ ಇದೆ. ಆ ಅಪ್ಲಿಕೇಷನ್ನೂ ರಿಜಿಸ್ಟರ್ ಆಗಿರಲೇಬೇಕಾಗುತ್ತದೆ. ಇಲ್ಲಿ ಹೆಂಡತಿ ಅರ್ಜಿ ಹಾಕದ ಆಯಮ್ಮನ ಹೆಸರಲ್ಲೂ ಕೂಡ ಆಕ್ಯುಪೆನ್ಸಿ ರೈಟ್ಸ್ ರಿಜಿಸ್ಟ್ರೇಷನ್ ಮಾಡಲು ಕಾನೂನಿನಲ್ಲಿ ತೊಡಕಿದೆಯೋ ಎಂಬುದನ್ನು ಮಾನ್ಯ ಕಂದಾಯ ಸಚಿವರು ಸ್ವಲ್ಪ ನೋಡಬೇಕಾಗುತ್ತದೆ. ಹೇಗೆಂದರೆ ಒಂದು ಪಕ್ಷ ಗಂಡ ಮಾತ್ರ ಅರ್ಜಿ ಹಾಕಿರುತ್ತಾನೆ, ಹೆಂಡತಿ ಅರ್ಜಿ ಹಾಕಿರುವುದಿಲ್ಲ ಆದರೆ ಆಕ್ಯುಪೆನ್ಸಿ ರೈಟ್ಸ್‌ನ್ನು ಆಯಮ್ಮನ ಹೆಸರಿಗೂ ರಿಜಿಸ್ಟ್ರ್ ಮಾಡಿ ಎಂದು ನೀವಲ್ಲಿ ತಿದ್ದುಪಡಿ ತಂದಿದ್ದೀರಿ. ಅದರಿಂದ ಕಾನೂನಿನ ತೊಡಕಾಗುತ್ತದೆ. ಏಕೆಂದರೆ ಅರ್ಜಿಯನ್ನು ಹೆಂಡತಿ ಹಾಕಿಯೇ ಇಲ್ಲ. ಇಂಥ ಸಂದರ್ಭದಲ್ಲಿ ಆಕ್ಯುಪೆನ್ಸಿ ರೈಟ್ಸನ್ನು ಜಂಟಿ ಖಾತೆಯಲ್ಲಿ ಹೆಂಡತಿ ಹೆಸರಿನಲ್ಲೂ ರಿಜಿಸ್ಟರ್ ಮಾಡಬಹುದೇ ಎಂದು ಸ್ವಲ್ಪ ನೋಡಬೇಕಾಗುತ್ತದೆ. ಅದಕ್ಕೆ ಏನಾಯ್ತಿಗೆ ನೀವು ಮತ್ತೊಂದು ತಿದ್ದುಪಡಿ ತರಬೇಕಾಗಬಹುದು. ಹೆಂಡತಿಯಿಂದ ಅರ್ಜಿ ಇರಲೇಬೇಕೆಂದೇನಿಲ್ಲವೆಂದು ತಿದ್ದುಪಡಿ ತರಬೇಕಾಗುತ್ತದೆ, ಏಕೆಂದರೆ ಆಕ್ಯುಪೆನ್ಸಿ ರೈಟ್ಸ್ ರಿಜಿಸ್ಟರ್ಡ್ ಆಗಬೇಕಾದರೆ ಅರ್ಜಿ ಸಲ್ಲಿಸಲೇಬೇಕೆಂಬ ಷರತ್ತು ಪ್ರಿಸಿಡೆಂಟ್ ಆಗಿರುತ್ತದೆ. ಅದರ ಬಗ್ಗೆ ತಿದ್ದುಪಡಿ ತರಲು ದಯಮಾಡಿ ಆಲೋಚನೆ ಮಾಡಬೇಕು.

ಶ್ರೀ ಕೆ.ಜಯಪ್ರಕಾಶ ಹೆಗಡೆ: ಮಾನ್ಯ ಮುದ್ದಹನುಮೇಗೌಡರೇನು ವಾದ ಮಂಡಿಸಿದರು ಅದನ್ನು ಒಪ್ಪಿಕೊಳ್ಳುವುದಾದರೆ ವೈಫ್ ಎಂದು ಇನಕ್ಲೂಡ್ ಮಾಡಲೇಬೇಕಾಗಿಲ್ಲ ಸಹಜವಾಗಿಯೇ ಅವಳು ಕುಟುಂಬದ ಸದಸ್ಯಳಾಗಿರುತ್ತಾಳೆ. ಅವಳು ಲೀಗಲ್ ಹೇರ್ ಆಗುತ್ತಾಳೆ. ಈಗ ಮೊದಲ ಹೆಂಡತಿಯಾಗಲಿ ಎರಡನೇ ಹೆಂಡತಿಯಾಗಲಿ she will come within the definition of the family. ಮತ್ತೆ ಅವರು ಹೇಳಿದ ಹಾಗೆ ಅರ್ಜಿಯನ್ನೇ ಹಾಕದ ಹೇಗೆ ರಿಜಿಸ್ಟರ್

ಮಾಡಲಿಕ್ಕಾಗುತ್ತದೆ?

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಾನ್ಯ ಸಭಾಧ್ಯಕ್ಷರೇ, ಈ ಗೇಣಿದಾರರ ಬಗ್ಗೆ ಇನ್ನೊಂದು ಸಮಸ್ಯೆಯೇನೆಂದರೆ ಬಹಳಷ್ಟು ಕುಟುಂಬಗಳು ಜಾಯಿಂಟ್ ಫ್ಯಾಮಿಲಿಯಾಗಿಯೇ ಇರುತ್ತವೆ. ಜಾಯಿಂಟ್ ಫ್ಯಾಮಿಲಿ ಇದ್ದಾಗ ಹೆಡ್ ಆಫ್ ದಿ ಫ್ಯಾಮಿಲಿಗೆ ಗೇಣಿದಾರರ ರೀತಿ ರಿಜಿಸ್ಟರ್ ಮಾಡುತ್ತೇವೆ. ಮಾನ್ಯ ಮುದ್ದಹನುಮೇಗೌಡರು ಹೇಳಿದ್ದಕ್ಕೆ ಉತ್ತರ ಎಂದರೆ ಒಂದು ಸಾರಿ ಒಬ್ಬ ಹೆಂಡತಿಯ ಹೆಸರಿನ ಮೇಲೆ ರಿಜಿಸ್ಟರ್ ಮಾಡಿದರೆ ಅವರ ಗಂಡನ ಬಾಕಿ ಹೆಂಡತಿಯರ ಹಕ್ಕನ್ನು ನಾವು ಇದರಿಂದ ಕಳೆಯುತ್ತೇವೆ. ಯಾರು ಕಷ್ಟಪಟ್ಟರುತ್ತಾರೆ, ಅವರಿಗೆ ಹಕ್ಕು ಸಿಗುವುದಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ಸಚಿವರು): ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯ ಉದ್ದೇಶವೇನೆಂದರೆ ಯಾವ ಗೇಣಿದಾರ ಮಾಲೀಕನಾಗಬೇಕು ಎಂದು ಸದಿಚ್ಛೆಯಿಂದ ಶಾಸನವನ್ನು ಮಾಡಿದೆವೋ ಆ ಉದ್ದೇಶವನ್ನೇ ಮರೆಯತಕ್ಕ ಕೆಲಸಗಳಾಗುತ್ತಿದ್ದಾವೆ. 15 ವರ್ಷ ಪರಭಾರೆಯನ್ನು ಮಾಡಬಾರದು ಎನ್ನುತ್ತೇವೆ. ಪರಭಾರೆ ಮಾಡಿಬಿಡುತ್ತಾರೆ. ಆಮೇಲೆ ಅವನ ಹೆಂಡತಿ ಓಡಿದುಕೊಂಡು ಕೇಳುವುದಕ್ಕೆ ಬರುತ್ತಾಳೆ. ಇಂಥ ಪ್ರಸಂಗಗಳು ಬಾರದ ರೀತಿಯಲ್ಲಿ ಅದಕ್ಕೆ ರಕ್ಷಣೆಯನ್ನು ಮಾಡಬೇಕೆಂದು ಹೇಳಿ ಮಾಡಿದ್ದೇವೆ. ಇದರಲ್ಲಿ ಎರಡು ವಿಷಯಗಳಿವೆ. ಲ್ಯಾಂಡ್ ಗ್ರಾಂಟ್ ಬೇರೆ. ಟೆನೆನ್ಸಿ ಬೇರೆ. ಈ ಟೆನೆನ್ಸಿ ಆಕ್ಟ್‌ನಲ್ಲಿ ಬರತಕ್ಕ ಒಂದು ಲೀಗಲ್ ಪಾಯಿಂಟ್ ಏನು ಇದೆ, ಆಟೊಮ್ಯಾಟಿಕಲಿ ನೀವು ಯಾರ ಹೆಸರಿಗೆ ಹೇಳಬೇಕೆಂದು ಈ ಶಾಸನದಲ್ಲಿ ಬರೆಯುತ್ತೀರೋ ಅದು ಹೋಗುತ್ತದೆ. ನಂತರ ಇದು ಯಾರಿಗೆ ಹೋಗಬೇಕು, ಯಾರಿಗೆ ಬಿಡಬೇಕೆನ್ನುವುದನ್ನು ಸಕ್ಸೆಷನ್ ಆಕ್ಟ್ ತೀರ್ಮಾನವನ್ನು ಮಾಡುತ್ತದೆ. This is one aspect. ಮತ್ತೊಂದು ಆಸ್ಪೆಕ್ಟ್ ಏನೆಂದರೆ ಈ ಸೆಕ್ಷನ್ 77(ಎ)ರಲ್ಲಿ ತೀರ್ಮಾನಗಳಾಗುವುದು ತಡವಾಗುತ್ತಿದ್ದರೆ ಒಂದು ವರ್ಷದಲ್ಲಿ ತೀರ್ಮಾನಗಳಾಗಬೇಕೆಂದು ಹೇಳಿದ್ದೇವೆ. ಆಗಲಿಲ್ಲ. ಮುಂದೇನು? ಅದಕ್ಕೆ ಟೈಮ್ ಲಿಮಿಟ್ ಏನೂ ಇಲ್ಲ. ಕೋರ್ಟ್‌ನಲ್ಲಿ ಯಾವಾಗ ತೀರ್ಮಾನವಾಗುತ್ತದೋ ಅದೇ ತೀರ್ಮಾನ. This is a very simple bill to protect the intrests of the tenants. Hon'ble Former Magistrate/ Munsiff knows that under the Succession Act, legal heirs, they alone can claim. After 1956 when the Hindu Law came into force, ಸ್ಪೌಸಸ್ ಎಂದು ಬರುವುದಿಲ್ಲ. Becuase we cover one wife one husband. That law does not recognise second wife or the second husband. Therefore ಸಕ್ಸೆಷನ್ ಆಕ್ಟ್‌ಗೆ ಏನು ತೊಂದರೆಯಾಗುತ್ತದೆ

ಎನ್ನುವುದನ್ನು ಹೇಳಬೇಕು ಅಷ್ಟೆ. Once it becomes the property of the husband and wife, we have to only to see that the land is not disposed of indiscreetly, without the knowledge of either husband or wife.

ಶ್ರೀ ಕೆ.ಬಿ.ಮಲ್ಲಿಕಾರ್ಜುನ್: ಮಲತಾಯಿ ಮಕ್ಕಳಿಗೆ ಏನು ಹಕ್ಕು ಇದೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ, ಜೀವಂತ ಹೆಂಡತಿ ಎಂದು ಹೇಳಿದ್ದಾರೆ. ಮೊದಲನೆ ಹೆಂಡತಿ ತೀರಿ ಹೋಗಿರುತ್ತಾಳೆ. ಅವರ ಮಕ್ಕಳು, ಜೀವಂತ ಇರುವ ಎರಡನೇ ಹೆಂಡತಿಯ ಹೆಸರನ್ನು ಕಲಂನಲ್ಲಿ ಸೇರಿಸಿದ ತಕ್ಷಣ ಸಕ್ಸೆಷನ್ ಆ್ಯಕ್ಟ್ ಪ್ರಕಾರವೇ ಮೊದಲೇ ಹೆಂಡತಿಯ ಮಕ್ಕಳು ಏನು ತಾಯಿ ಸತ್ತಿರುವ ಮಕ್ಕಳ ಅಧಿಕಾರವನ್ನು ಪೂರ್ಣವಾಗಿ ಕಳೆದುಕೊಳ್ಳುತ್ತಾರೆ. ಇದಕ್ಕೆ ಅವರು ಸಮಾಧಾನಕರವಾಗಿರತಕ್ಕ ಉತ್ತರವನ್ನು ಹೇಳದೆ ಹೋದರೆ ಇದು ಮುಂದೆ ಕೋರ್ಟು ಕಛೇರಿಗೆ ಹೋಗಿ ಬಹಳಷ್ಟು ತೊಂದರೆಯಾಗುತ್ತದೆ. ಬೇಕಾದರೆ ಇದರ ಬಗ್ಗೆ ಇನ್ನೂ ಅಧ್ಯಯನವನ್ನು ಮಾಡಲಿ. ಇನ್ನೊಂದು ಜಾಯಿಂಟ್ ಫ್ಯಾಮಿಲಿಗಳಿರುತ್ತವೆ. ಕುಟುಂಬದ ಹಿರಿಯರ ಹೆಸರಿನಲ್ಲಿ ಆಸ್ತಿ ಇರುತ್ತದೆ. ಮಕ್ಕಳು ನಾಲ್ಕು ಜನ ಇರುತ್ತಾರೆ. ತಾಯಿ ಹೆಸರಿಗೆ ಬಂದರೆ ಬರುತ್ತದೆ. ಆದರೆ ಅಣ್ಣನ ಮತ್ತು ಅಣ್ಣನ ಹೆಂಡತಿಯ ಹೆಸರಿಗೆ ಬಂದತಕ್ಷಣ ಆ ಅವಿಭಕ್ತ ಕುಟುಂಬದ ತಮ್ಮನ ಮಕ್ಕಳಿಗಾಗಲಿ, ತಮ್ಮನಿಗಾಗಲೀ ಹಕ್ಕು ಬರುವುದಿಲ್ಲ. ಸಕ್ಸೆಷನ್ ಆ್ಯಕ್ಟ್‌ನಲ್ಲಿ ನಾವು ಕರೆಕ್ಟ್ ಆಗಿ ನೋಡಬೇಕಾಗುತ್ತದೆ. ನೀವು ಇವರಡನ್ನು ನಿವಾರಣೆ ಮಾಡದೆ ಹೋದರೆ ಬಹಳ ಗೊಂದಲವಾಗಿ ಅವಿಭಕ್ತ ಕುಟುಂಬಗಳು ಮತ್ತು ತಾಯಿ ಸತ್ತ ಮಕ್ಕಳಿಗೆ ಇದರಿಂದ ನಾವು ಮರಣಶಾಸನವನ್ನು ಬರೆದಂತಾಗುತ್ತದೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಕಾನೂನು ಸಚಿವರೇ, ತಾವೇನು ವಾದವನ್ನು ಮಾಡಿದಿರಿ, ಅದೇ ವಾದವನ್ನು ನಾನು ಅವರಿಗೆ ಹೇಳಿದ್ದು. ನಾನೇನು ಹೇಳಿದೆ, ಗಂಡ ಅಥವಾ ಹೆಂಡತಿಯ ಹೆಸರಿನಲ್ಲಿ ರಿಜಿಸ್ಟ್ರೇಷನ್ ಆದರೆ ಸಕ್ಸೆಷನ್ ಆ್ಯಕ್ಟ್ ಬರುತ್ತದೆ. ಅದಕ್ಕೇನೂ ತಾವು ಆತಂಕ ಪಡಬೇಕಾಗಿಲ್ಲ. ಎಲ್ಲಾ ಕುಟುಂಬದ ಸದಸ್ಯರಿಗೂ ಅವರಿಗೆ ಹಕ್ಕು ಬರುತ್ತದೆ ಎನ್ನುವ ವಾದವನ್ನು ನಾನು ಮಾಡಿದ್ದೇನೆ. You did not follow my arguments, and that is why you referred to me. In the absence of any application, can we register occupancy rights in favour of the wife, because wife has not filed application under this Act? Can we register in her name? That is my question.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರೂ ಕೂಡ ಇದರಲ್ಲಿ ಪ್ರವೇಶ ಮಾಡಬೇಕಾಗುತ್ತದೆ. ಇದು ಹುಡುಗಾಟವಲ್ಲ. ನಾಳೆ

ಸಿವಿಲ್ ಕೇಸ್‌ಗಳು ಜಾಸ್ತಿಯಾಗಲಿಕ್ಕೆ ಒಂದು ದೊಡ್ಡಕಾರಣವಾಗುತ್ತದೆ. ನಮ್ಮಲ್ಲಿ ಎಂಟು-ಹತ್ತು ಸಾವಿರ ಗೇಣಿದಾರಿಕೆಯ ಪ್ರಕರಣಗಳಿದ್ದಾವೆ. ಈಗಾಗಲೇ ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ್‌ರವರು ಬಹಳ ಒಳ್ಳೆಯಸಂಗತಿಯನ್ನು ಎತ್ತಿದರು. ನಮ್ಮಲ್ಲೆಲ್ಲಾ ಅಣ್ಣತಮ್ಮಂದಿರು ಒಟ್ಟಿಗೆ ಇದ್ದಾರೆ. ಅಣ್ಣನ ಹೆಸರಿನಲ್ಲಿ ಲ್ಯಾಂಡ್ ಟ್ರಬ್ಯೂನಲ್‌ಗೆ ಹಾಕಿದ್ದಾರೆ. ಅಣ್ಣ ಅಣ್ಣನ ಹೆಂಡತಿ ಹೆಸರಿಗೆ ಇಬ್ಬರಿಗೆ ಮಾಡಿಬಿಟ್ಟರೆ ತಮ್ಮ ಎಲ್ಲಿ ಕ್ಲೈಮ್ ಮಾಡುವುದಕ್ಕಾಗುತ್ತದೆ? ಮತ್ತೆ ತಂದೆ ಮತ್ತು ತಂದೆಯ ಎರಡನೇ ಹೆಂಡತಿ ಹೆಸರಿಗೆ ಮಾಡಿದರೆ ಎಂದು ಇಟ್ಟುಕೊಳ್ಳಿ. ಅದು ಆಗ ಅನ್‌ಸೆಸ್ಟರಲ್ ಪ್ರಾಪರ್ಟಿಯಾಗುವುದಿಲ್ಲ. ಅದು ಅವರ ಸ್ವಯಾರ್ಜಿತ ಸ್ವತ್ತಾಗುತ್ತದೆ. ಒಟ್ಟಿಗೆ ಕುಟುಂಬದಲ್ಲಿದ್ದರೂ ಕೂಡ ಹಿಂದಿನ ಹೆಂಡತಿ ಮತ್ತು ಮಕ್ಕಳು ಕ್ಲೈಮ್ ಮಾಡುವುದಕ್ಕಾಗುವುದಿಲ್ಲ. ಇದು ತುಂಬಾ ತೊಂದರೆಯಾಗುತ್ತದೆ. ನಾಳೆ ಇಡೀ ಕುಟುಂಬ ಕುಟುಂಬಗಳೇ ಕೊಚ್ಚಿಕೊಂಡು ಸಾಯುತ್ತಾರೆ. ನಮ್ಮಲ್ಲಿ ಸಾಗರ, ಹೊಸನಗರ, ತೀರ್ಥಹಳ್ಳಿ, ಈ ಮಲೆನಾಡು ಬೆಲ್ಟ್‌ನಲ್ಲಿ ಸಾವಿರಾರು ಕುಟುಂಬಗಳು ಈ ಗೇಣಿದಾರಿಕೆಯ ಒಂದು ಅದಿಭೋಗದಾರರಾಗಿ ಇವತ್ತು ಜೀವನವನ್ನು ಮಾಡುತ್ತಿದ್ದಾರೆ. ಮತ್ತೆ ಇದು ಪೂರ್ಣವಾಗಲಿಲ್ಲ. ನಮ್ಮ ವಿರೋಧಪಕ್ಷದ ನಾಯಕರು ಕೇಳಿದ್ದಕ್ಕೆ 'ಇನ್ನು ಮುಂದೆ ಆಗುವುದಕ್ಕೆ' ಎಂದು ತಾವು ಹೇಳಿದಿರಿ. ನಮ್ಮಲ್ಲಿ ಇನ್ನೂ ಜಡ್ಜ್‌ಮೆಂಟ್‌ಗೆ ಬಾಕಿ ಇರುವುದು ಇದೆ. ಎರಡನೆಯದು ಈ ಸರ್ವೆ ಷರತ್ತಿಗೆ ಒಳಪಟ್ಟು ಜಡ್ಜ್‌ಮೆಂಟನ್ನು ಮಾಡಿದರು. ಈಗ ಪುನಃ ಇನ್ನೊಂದು ಜಡ್ಜ್‌ಮೆಂಟನ್ನು ಮಾಡಬೇಕಾಗಿದೆ. ನನ್ನ ಒಂದು ತಾಲ್ಲೂಕಿನಲ್ಲಿ ಎರಡನೇ ಜಡ್ಜ್‌ಮೆಂಟ್‌ಗೆ ಎಂಟು ಸಾವಿರ ಅರ್ಜಿಗಳಿವೆ. ಆ ಎಂಟು ಸಾವಿರ ಕುಟುಂಬಗಳು ಏನೇನೋ ಆಗಿಹೋಗಿವೆ. ಅವತ್ತು ಅರ್ಜಿ ಹಾಕಿದವರ ಹೆಸರು ಮತ್ತು ಅವರ ಹೆಂಡತಿಯ ಹೆಸರಿಗೆ ಮಾಡಿದರೆ ನಾಳೆ ಅವರೆಲ್ಲರ ಕುತ್ತಿಗೆಗೆ ನೇಣುಹಾಕಿದಂತಾಗುತ್ತದೆ. ಈ ಒಂದು ಪರಿಸ್ಥಿತಿಗೆ ತೆಗೆದುಕೊಂಡು ಹೋಗಿ ದೂಡುವುದು ಬೇಡ. ಈ ಒಂದು ಕಾನೂನನ್ನು ತರುವಾಗ ಸಾಕಷ್ಟು ಇದರ ಬಗ್ಗೆ ಚರ್ಚೆಯನ್ನು ಮಾಡೋಣ. ಸಾಕಷ್ಟು ಇದರ ಬಗ್ಗೆ ಯೋಚನೆ ಮಾಡಿ ಲೀಗಲ್ ಕಾನ್‌ಸಿಕ್ವೆನ್ಸ್‌ನ್ನು ಯೋಚನೆ ಮಾಡಿ ತರಬೇಕು. ಮತ್ತೆ ಕುಟುಂಬಗಳಲ್ಲಿ ಕಲಹವನ್ನು ಹುಟ್ಟು ಹಾಕಿ ಮಾಡುವುದು ಬೇಡ. ಇವತ್ತು ಬಡವರು ನಮ್ಮದಿಯಿಂದ ಜೀವನವನ್ನು ಮಾಡುತ್ತಿದ್ದಾರೆ. ಅವರಿಗೆ ಮತ್ತೆ ತೊಂದರೆಯಾಗುವ ಹಾಗೆ ಕೋರ್ಟುಕಟ್ಟಲೆ ಹತ್ತುವ ಹಾಗೆ ಲಾಯರ್‌ಗಳಿಗೆ ತಮ್ಮ ಹಣವನ್ನೆಲ್ಲಾ ಖರ್ಚು ಮಾಡುವ ಹಾಗೆ ದಯವಿಟ್ಟು ತಾವು ಹಿರಿಯರಾಗಿದ್ದಾಗ ತಮ್ಮ ನೇತೃತ್ವದಲ್ಲಿ ಇದು ನಡೆಯಬಾರದು. ಅದಕ್ಕಾಗಿ ನಾನು ಇದನ್ನು ಹೇಳುತ್ತಿರುವುದು.

ಶ್ರೀ ಸಿ.ಚೆನ್ನಿಗಪ್ಪ(ಪಾವಗಡ): ಮಾನ್ಯ ಅಧ್ಯಕ್ಷರೇ, ಇದು ಹಿಂದೂ ಸಕ್ಸೆಷನ್ ಆಕ್ಟ್ ಪ್ರಕಾರ ಈ ಕಾನೂನಿಗೆ ತಿದ್ದುಪಡಿಯನ್ನು ತಂದಿದೆ. ಇಲ್ಲಿ ನಮ್ಮ ಸದಸ್ಯರಾದ

ಜ್ಞಾನೇಂದ್ರರವರು ಹೇಳಿದ ಹಾಗೆ ಇವತ್ತು ಅವಿಭಕ್ತ ಕುಟುಂಬಗಳು ಆಸ್ತಿಯನ್ನು ಒಬ್ಬರೇ ಒಬ್ಬರು ತೆಗೆದುಕೊಂಡು 30 ಎಕರೆ, 40 ಎಕರೆ, 50 ಎಕರೆ ಇದ್ದಾಗ ಅದನ್ನು ವಿಭಾಗ ಮಾಡದೇ ಹೋದಾಗ ಕೊನೆಗೆ ಅದು ರಿಜಿಸ್ಟರ್ ಮಾಡಿಕೊಡುವುದಿಲ್ಲ. ಮತ್ತೆ ಅದನ್ನು ಭಾಗ ಮಾಡುವುದಿಲ್ಲ. ಇದರಿಂದ ಭಾರಿ ಗೊಂದಲವುಂಟಾಗಿ ಸಮಾಜದಲ್ಲಿ ಅಣ್ಣತಮ್ಮಂದಿರು ಒಂದಾಗಿ ಬಾಳುವ ಬದಲು ಮನೆ ಮನೆಗಳೇ ಕಚ್ಚಾಡುವುದಕ್ಕೆ ಅವಕಾಶವಾಗುತ್ತದೆ. ಈ ಕಾನೂನಿನಿಂದ ಅನುಕೂಲವಾಗುವುದಿಲ್ಲ. ಇದರ ಬಗ್ಗೆ ತಾವು ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ಅನೇಕ ನಮ್ಮ ಸದಸ್ಯರುಗಳು ಅವರವರ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಪ್ರಪ್ರಥಮವಾಗಿ ಸೆಕ್ಷನ್ 48(ಈ)ನ್ನು ಬಿಟ್ಟು ಸೆಕ್ಷನ್ 77(ಎ) ಅನ್ನು ಒಪ್ಪಬಹುದು ಎಂದು ಹೇಳುತ್ತೇನೆ. ಅದಕ್ಕೆ ಸೂಕ್ತವಾದ ಅಮೆಂಡ್‌ಮೆಂಟ್‌ಗಳನ್ನು ತಂದು ನಾಳೆಯೋ ನಾಡಿದ್ದೋ ಪುನಃ ಅದನ್ನು ಮಂಡಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಟ್ಟಿಗೆ ಮಾಡಬಹುದಲ್ಲಾ?

ಅಧ್ಯಕ್ಷರು: ಮಾನ್ಯ ಸದಸ್ಯರುಗಳ ಅಭಿಪ್ರಾಯವೇನಿದೆ, ಅದನ್ನು ಎಕ್ಸಾಮಿನ್ ಮಾಡಿ, ಇದನ್ನು ನಾಳೆಯೋ ನಾಡಿದ್ದೋ ತೆಗೆದುಕೊಳ್ಳೋಣ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ಆಗಬಹುದು ಸ್ವಾಮಿ.

(ii) ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ(ತಿದ್ದುಪಡಿ) ವಿಧೇಯಕ, 2001.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯ ಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, "2001ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಡಿ.ಬಿ.ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, This Reform Bill will have